# ಜ್ಞಾನಶಕ್ತಿ

ಮಾಸ ಪತ್ರಿಕೆ

JNANASHAKTHI



ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು - 575 003

Postal Regd. No. MNG / 1023 / 2012-14
Date of Posting, Kodialbail post office
on 12th of every Month

ಸಂಪುಟ ೩ | ನೋಂದಣಿ ಸಂಖ್ಯೆ : KARBIL / 2005 / 16123 | ಎಪ್ರಿಲ್ - 2014 | ಸಂಚಿಕೆ ೪


ಮುಂದಿನ ಕಾರ್ಯಕ್ರಮಗಳು : 16–04–2014ರಂದು ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ "ಗಾಯತ್ರಿ ಜಪಯಜ್ಞ"
03–05–2014ರಂದು ಶ್ರೀ ಸುಬ್ರಹ್ಮಣ್ಯ ಸಭಾ ವತಿಯಿಂದ "ಶಂಕರ ಜಯಂತಿ" ಆಚರಣೆ

# 'ಶ್ರೀ ಸಭಾ'ದಲ್ಲಿ ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳ ವರ್ಧಂತ್ಯುತ್ಸವ

ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳ ವರ್ಧಂತ್ಯುತ್ಸವವನ್ನು ತಾ. 6–4–2014 ರಂದು ಶ್ರೀ ಸುಬ್ರಹ್ಮಣ್ಯ ಸಭಾಸದನದಲ್ಲಿ ಅದ್ದೂರಿಯಾಗಿ ಆಚರಿಸಲಾಯಿತು.

ಬೆಳಗ್ಗೆ 10–00 ಘಂಟೆಗೆ ಸರಿಯಾಗಿ ಸಾಮೂಹಿಕ ಲಲಿತಾ ಸಹಸ್ರನಾಮ, ವಿಷ್ಣು ಸಹಸ್ರನಾಮ ಪಠಣದೊಂದಿಗೆ ಕಾರ್ಯಕ್ರಮ ಆರಂಭಗೊಂಡಿತು. ಶ್ರೀ ಸತ್ಯನಾರಾಯಣ ಪೂಜೆಯ ಸಂಕಲ್ಪದ ಅನಂತರ ಹಲವಾರು ಸದಸ್ಯರುಗಳಿಂದ ಭಜನಾ ಕಾರ್ಯಕ್ರಮ ನೆರವೇರಿತು. ಹಿಂದೂಧರ್ಮದ ಮಹತ್ವ ಮತ್ತು ಅದರ ಉಳಿವಿನ ಬಗ್ಗೆ ತಾಳಿಪ್ಪಾಡಿ ಮೋಹನ್ ರಾವ್‌ರವರು ಮಾತನಾಡಿದರು. ಶ್ರೀಯುತ ಸಂಜಯ ಕುಮಾರ್ ಪಲಿಮಾರ್‌ರವರು ವರ್ಧಂತ್ಯುವ ಶುಭಸಂದರ್ಭದಲ್ಲಿ ಪ್ರಸ್ತುತ ಪೀಠಾಧೀಶ್ವರರಾಗಿರುವಂತಹ ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳ ಜೀವನಚರಿತ್ರೆಯನ್ನು, ಸಾಧಿಸಿದ ಮಹತ್ ಕಾರ್ಯಗಳನ್ನು ಸವಿಸ್ತಾರವಾಗಿ ತಿಳಿಸಿ ಅವರ ಸಂದೇಶವನ್ನು ನಾವೆಲ್ಲರೂ ಪಾಲಿಸಿ ಧರ್ಮವನ್ನು ಉಳಿಸಬೇಕು ಎಂಬುದಾಗಿ ತಮ್ಮ ಉಪನ್ಯಾಸದಲ್ಲಿ ತಿಳಿಸಿದರು. ಮಹಾಮಂಗಳಾರತಿಯ ಅನಂತರ ಪ್ರಸಾದ ಭೋಜನವನ್ನು ಏರ್ಪಡಿಸಲಾಗಿತ್ತು. ಈ ದಿನದ ಕಾರ್ಯಕ್ರಮವನ್ನು ಶ್ರೀಯುತ ನಂದಳಿಕೆ ಬಾಲಚಂದ್ರ ರಾವ್ ದಂಪತಿಗಳು ತಮ್ಮ ಷಷ್ಟ್ಯಬ್ದಿ ಪೂರೈಸಿದ ಸವಿನೆನಪಿಗಾಗಿ ಪ್ರಾಯೋಜಿಸಿದ್ದರು. ಕಾರ್ಯಕ್ರಮವನ್ನು ಶ್ರೀಯುತ ಸುರೇಶ್ ಕಡಬರವರು ನಿರೂಪಿಸಿದರು.




*ವರದಿ : **ಶ್ರೀಮತಿ ಅರುಣಾ ಸೋಮಶೇಖರ್*** *ಚಿತ್ರ : **ಶ್ರೀ ರಘುವೀರ್ ಪೆರ್ಡೂರು***




## ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನ

**ಪಾವಂಜೆ, ಹಳೆಯಂಗಡಿ – 574 146, ದ. ಕ.**

ಆತ್ಮೀಯರೇ,

**ಶ್ರೀ ಶೃಂಗೇರಿ ಶಾರದಾ ಪೀಠಾಧೀಶ್ವರ ಜಗದ್ಗುರು**

**ಶ್ರೀ ಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳವರ ಪರಮಾನುಗ್ರಹದಿಂದ**

ಶ್ರೀ ಜಯ ನಾಮ ಸಂವತ್ಸರದ ಚೈತ್ರ ಶುದ್ಧ ತ್ರಯೋದಶಿಯಿಂದ

ಚೈತ್ರ ಬ। ಚತುರ್ಥಿಯವರೆಗೆ **ದಿನಾಂಕ 13–4–2014ನೇ ಭಾನುವಾರದಿಂದ**

**ದಿನಾಂಕ 19–4–2014ನೇ ಶನಿವಾರದವರೆಗೆ**



## ಮಹಾರಥೋತ್ಸವವು

**ವಿವಿಧ ಧಾರ್ಮಿಕ ಕಾರ್ಯಕ್ರಮ**ಗಳೊಂದಿಗೆ ಜರಗಲಿರುವುದು.

ಈ ಮಹೋತ್ಸವಕ್ಕೆ ತಾವೆಲ್ಲರೂ ಬಂದು ಉತ್ಸವಾದಿಗಳಲ್ಲಿ ಭಾಗವಹಿಸಿ, ಶ್ರೀಮುಡಿ ಗಂಧ–ಪ್ರಸಾದಾದಿಗಳನ್ನು ಸ್ವೀಕರಿಸಿ, ಶ್ರೀ ದೇವರ ಕೃಪೆಗೆ ಪಾತ್ರರಾಗಬೇಕಾಗಿ ಅಪೇಕ್ಷಿಸುತ್ತೇವೆ.

***ಆಡಳಿತ ಮೊಕ್ತೇಸರರು, ಧರ್ಮದರ್ಶಿಗಳು** ಮತ್ತು **ಆಡಳಿತ ಮಂಡಳಿಯ ಸದಸ್ಯರು***


## ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು



**ಸಮಾಜ ಬಾಂಧವರೇ,**

**ದಿನಾಂಕ 03–05–2014 ಶನಿವಾರ ಸಂಜೆ ಗಂಟೆ 5-00ರಿಂದ**

**ಶ್ರೀ ಸಭಾದ ವತಿಯಿಂದ**

## ಶ್ರೀ ಶಂಕರ ಜಯಂತಿ ಆಚರಣೆ

**ನಡೆಯಲಿದೆ.**

**ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಶ್ರೀಗುರುಗಳ ಕೃಪಾಶೀರ್ವಾದಕ್ಕೆ ಪಾತ್ರರಾಗಬೇಕೆಂದು ವಿನಂತಿಸುತ್ತೇವೆ.**

***ಅಧ್ಯಕ್ಷರು** ಮತ್ತು **ಸರ್ವ ಸದಸ್ಯರು***

**ಕಾರ್ಯಕ್ರಮಗಳು :**

| | |
|---|---|
| ಸಂಜೆ 5-00ರಿಂದ : | ವಿವಿಧ ಸ್ಪರ್ಧೆಗಳು |
| ಸಂಜೆ 5-30ರಿಂದ : | ಸಾಮೂಹಿಕ ಲಲಿತ ಸಹಸ್ರನಾಮ, ವಿಷ್ಣು ಸಹಸ್ರನಾಮ, ಶ್ರೀ ಶಂಕರಾಚಾರ್ಯ ಅಷ್ಟೋತ್ತರ ಪಾರಾಯಣ ಮತ್ತು ಶ್ರೀ ದುರ್ಗಾನಮಸ್ಕಾರ ಪೂಜೆ ಪ್ರಾರಂಭ |
| ಸಂಜೆ 6-30ರಿಂದ : | ಧಾರ್ಮಿಕ ಉಪನ್ಯಾಸ |
| ರಾತ್ರಿ 8-00ಕ್ಕೆ : | ಮಹಾಪೂಜೆ, ಪ್ರಸಾದ ವಿತರಣೆ |
| ರಾತ್ರಿ 8-30ರಿಂದ : | ಪ್ರಸಾದ ಭೋಜನ. |

***ಹೆಚ್ಚಿನ ಮಾಹಿತಿಗಾಗಿ :***

**ಶ್ರೀ ಪಿ. ಶ್ರೀಕಾಂತ್ ರಾವ್**
ಮೊ. : 9343361618

**ಶ್ರೀಮತಿ ಅರುಣಾ ಸೋಮಶೇಖರ್**
ಮೊ. : 9880413243, 2452860 (R)

*ವಿ. ಸೂ. : ಸದಸ್ಯರು ಅರ್ಚನೆಗಾಗಿ ಪುಷ್ಪ ಹಾಗೂ ಪತ್ರೆಗಳನ್ನು ತಂದು ಸಹಕರಿಸಲು ವಿನಂತಿ.*

## ಸಮಾಜದ ಬಂಧು–ಬಾಂಧವರಿಗೆ ಹೃದಯಾಂತರಾಳದ ಕೃತಜ್ಞತೆಗಳು



**ಚಿ। ಸೌ। ಸಂಗೀತಾ ರಾವ್** ಮತ್ತು **ಚಿ। ವಿವೇಕ್ ರಾವ್**

ಬೆಂಗಳೂರಿನ ನಿವಾಸಿಗಳಾದ **ಶ್ರೀಮತಿ ಸಂಧ್ಯಾ–ಶ್ರೀ ಕರ್ವಾಲ್ ಶಂಕರನಾರಾಯಣ ರಾವ್**‌ರವರ ಸುಪುತ್ರಿ **ಚಿ। ಸೌ। ಸಂಗೀತಾ** ಮತ್ತು **ಶ್ರೀಮತಿ ಜಯಶ್ರೀ – ಶ್ರೀ ಶೆಡ್ಯ ಸುಧಾಕರ ರಾವ್**‌ರವರ ಸುಪುತ್ರ **ಚಿ। ವಿವೇಕ್**‌ರವರ ವಿವಾಹ ಮಹೋತ್ಸವವು 29-11-2013ರಂದು ಬೆಂಗಳೂರಿನ ವಿಜಯನಗರದಲ್ಲಿರುವ 'ಬಂಟರ ಸಂಘ' ಕಲ್ಯಾಣಮಂಟಪದಲ್ಲಿ ಗುರುಹಿರಿಯರ ಆಶೀರ್ವಾದದಿಂದ ಸಾಂಗವಾಗಿ ನೆರವೇರಿತು. ಮಧ್ಯಾಹ್ನ 12-10ರ ಮುಹೂರ್ತವಿದ್ದು ಸಮಯದ ಒತ್ತಡದ ಮಧ್ಯೆಯೂ ವಧೂವರರ ಮಾತಾಪಿತರು ಅತಿಥಿಗಳ ಯೋಗಕ್ಷೇಮ ವಿಚಾರಿಸಿದೆವು. ನಮ್ಮ ಅಕ್ಕರೆಯ ಕರೆಯೋಲೆಗೆ ಸ್ಪಂದಿಸಿ ವಿವಾಹ ಮಹೋತ್ಸವ ಮತ್ತು ಅದೇ ದಿನ ಸಂಜೆ ನಡೆದ ಔತಣಕೂಟಕ್ಕೆ ಆಗಮಿಸಿ ನೂತನ ದಂಪತಿಗಳನ್ನು ಆಶೀರ್ವದಿಸಿದ ಮತ್ತು ಶುಭಹಾರೈಸಿದ ಸಮಾಜದ ಸಮಸ್ತ ಬಂಧುಗಳಿಗೆ ಹಾಗೂ ಮಿತ್ರರಿಗೆ ಆಭಾರಿಯಾಗಿದ್ದೇವೆ ಮತ್ತು ಕೃತಜ್ಞತೆಗಳನ್ನು ಈ ಮೂಲಕ ವ್ಯಕ್ತಪಡಿಸುತ್ತಿದ್ದೇವೆ.

**ಸುದರ್ಶನ ರಾವ್ ಕರ್ವಾಲ್**
Pilot, Jet Airways, Bangalore
ಮೊ. : 9880363622

**ಶಂಕರನಾರಾಯಣ ರಾವ್ ಕರ್ವಾಲ್**
**ಸಂಧ್ಯಾ ಎಸ್. ರಾವ್**
ಮೊ. : 9449958151 / 080 - 23163431

## ಜ್ಞಾನಶಕ್ತಿ ಮಾಸ ಪತ್ರಿಕೆ

ಪ್ರಧಾನ ಸಂಪಾದಕರು :

**ಎಂ. ಎಸ್. ರಘುನಾಥ ರಾವ್**
**ಪುತ್ತೂರು**
ಮೊಬೈಲ್ : 9448481696

ಸಂಪಾದಕರು :

**ಪಿ. ಶ್ರೀಕಾಂತ ರಾವ್**
ಮೊಬೈಲ್ : 9343361618

ಸಂಪಾದಕ ಮಂಡಳಿ :

**ನಾಗರಾಜ್ ವರ್ಕಾಡಿ**
**ರಘುವೀರ್ ಪೆರ್ಡೂರು**
**ಟಿ. ಬಿ. ಮೋಹನ್ ರಾವ್**
**ಕೃಷ್ಣ ಭಟ್**

ಆರ್ಥಿಕ ಸಲಹಾ ಸಮಿತಿ :

**ಕರುಣ್ ರಾವ್ ಬೆಳ್ಳೆ**
**ಅನಿಲ್ ರಾವ್ ಬಿ. ಎಸ್.**

ಗೌರವ ಸಲಹೆಗಾರರು :

**ಚೇತನ್ ಶರ್ಮ**
**ಶ್ರೀಮತಿ ಅರುಣಾ ಸೋಮಶೇಖರ್**

ಪ್ರಕಾಶಕರು :

**ಸಿ. ಎಸ್. ರಾವ್, ಉಡುಪಿ**


## "ನಮ್ಮ ಅಜೀವ ಬೆಂಬಲಿಗರು"

**ಶ್ರೀ ಬಿ. ವಿ. ರಾವ್,** ಬೆಂಗಳೂರು
**ಶ್ರೀ ವೈ. ವಿ. ರತ್ನಾಕರ ರಾವ್,** ಸುರತ್ಕಲ್
**ಶ್ರೀ ಸೋಮಶೇಖರ ರಾವ್,** ಪಡುಬಿದ್ರಿ
**ಶ್ರೀ ಶಶಿಧರ್ ರಾವ್,** ತೋಕೂರ್
**ಶ್ರೀಮತಿ ಹೇಮಲತಾ ರಾವ್,** ಬಜ್ಪೆ
**ಶ್ರೀ ಬಿ. ಜಗದೀಶ್ ರಾವ್,** ವಗ್ಗ
**ಶ್ರೀಮತಿ ಅನ್ನಪೂರ್ಣ ರಾವ್,** ನವ ಮುಂಬಯಿ
**ಶ್ರೀ ಕೆ. ವಿ. ರಮೇಶ್,** ಕಾಸರಗೋಡು
**ಶ್ರೀ ಕೆ. ಸುರೇಶ್ ರಾವ್,** ಉಡುಪಿ
**ಶ್ರೀ ಮಹೇಶ್ ಉಪಾಧ್ಯಾಯ,** ಬೆಂಗಳೂರು
**ಶ್ರೀ ಪ್ರಸನ್ನ ಉಪಾಧ್ಯಾಯ,** ಪಾವಂಜೆ
**ಶ್ರೀ ಬಿ. ರಾಜ್‌ಕುಮಾರ್,** ಅತ್ತಾವರ
**ಶ್ರೀ ಬಿ. ಜಯಪ್ರಕಾಶ್,** ಬಂಟ್ವಾಳ
**ಶ್ರೀ ರಮಾನಂದ ರಾವ್,** ಪುತ್ತೂರು
**ಶ್ರೀ ರಾಯಿ ದಿನೇಶ್ ರಾವ್,** ಬಜಾಲ್
**ಶ್ರೀ ಪ್ರಭಾಕರ್ ಭಂಡಿ,** ಪೆರ್ಡೂರ್
**ಶ್ರೀ ಮುರಳಿಕೃಷ್ಣ,** ಉಡುಪಿ
**ಶ್ರೀ ಡಾ. ಮೇಘಶ್ಯಾಂ ರಾವ್,** ಕರಂಗಲ್ಪಾಡಿ
**ಶ್ರೀ ಉದಯಕುಮಾರ್,** ಕರಂಗಲ್ಪಾಡಿ
**ಶ್ರೀ ಶರತ್ ರಾವ್,** ಉಡುಪಿ
**ಶ್ರೀ ಎನ್. ಮೋಹನ್ ರಾವ್,** ಸುರತ್ಕಲ್
**ಶ್ರೀ ಮನೋಹರ್ ರಾವ್,** ಮುಂಬಯಿ
**ಶ್ರೀ ಸದಾನಂದ ರಾವ್,** ಸುರತ್ಕಲ್
**ಶ್ರೀ ಶಿವಪ್ರಸಾದ್ ರಾವ್,** ಸುರತ್ಕಲ್
**ಶ್ರೀ ಶಿವಚಂದ್ರ ಭಟ್,** ಹಳೆಯಂಗಡಿ
**ಶ್ರೀ ಶಂಕರನಾರಾಯಣ ರಾವ್,** ಬೆಂಗಳೂರು


## ಆದರದ ಆಮಂತ್ರಣ

### ಕುಮಾರಿ ಪ್ರೇರಣಾ - ಭರತನಾಟ್ಯ ರಂಗಪ್ರವೇಶ

"ನಾಟ್ಯರಾಣಿ ಶಾಂತಲಾ" ಪ್ರಶಸ್ತಿ ಪುರಸ್ಕೃತ
ದಿ। ನಾಟ್ಯಾಚಾರ್ಯ ಯು. ಎಸ್. ಕೃಷ್ಣ ರಾವ್ ಇವರ ಸುಪುತ್ರ
ನಾಟ್ಯಗುರು "ನಾಟ್ಯ ವಿಶಾರದ"
**ವಿದ್ವಾನ್ ಯು. ಕೆ. ಪ್ರವೀಣ್ ಹಾಗೂ ಶ್ರೀಮತಿ ಉಷಾ ಪ್ರವೀಣ್**
(ಕದ್ರಿ ನೃತ್ಯ ವಿದ್ಯಾನಿಲಯ ಚಾರಿಟೇಬಲ್ ಟ್ರಸ್ಟ್ (ರಿ.), ಮಂಗಳೂರು) ಇವರ ಶಿಷ್ಯೆ



**ಶ್ರೀಮತಿ ಭಾರತಿ ರಾವ್ ಮತ್ತು**
**ಶ್ರೀ ಅನಿಲ್ ರಾವ್ ಬಿ. ಎಸ್., ಮಂಗಳೂರು**
ಇವರ ಸುಪುತ್ರಿ

**ಕು। ಪ್ರೇರಣಾ ರಾವ್**
ಇವರ

### ಭರತನಾಟ್ಯ ರಂಗಪ್ರವೇಶ

ತಾ. **27-4-2014ನೇ ಗುರುವಾರ ಸಾಯಂಕಾಲ ಗಂಟೆ 5-30ಕ್ಕೆ ಸರಿಯಾಗಿ**
**ಮಂಗಳೂರು 'ಪುರಭವನ'ದಲ್ಲಿ ನಡೆಯಲಿರುವುದು.**
ಈ ಕಾರ್ಯಕ್ರಮಕ್ಕೆ ತಾವೆಲ್ಲರೂ ಬಂದು ಕಾರ್ಯಕ್ರಮವನ್ನು ವೀಕ್ಷಿಸಿ
ಚಿರಂಜೀವಿಯನ್ನು ಆಶೀರ್ವದಿಸಬೇಕಾಗಿ ಅಪೇಕ್ಷಿಸುವ –
**ಶ್ರೀಮತಿ ಭಾರತಿ ಮತ್ತು ಶ್ರೀ ಅನಿಲ್ ರಾವ್ ಬಿ. ಎಸ್.**
**ಮಂಗಳೂರು**



## ಶಿವಬ್ರಾಹ್ಮಣ (ಸ್ಥಾನಿಕ) ಸಮಾಜ ಸೇವಾ ಸಂಘ (ರಿ.)

**'ಶಿವ ಸದನ' (ಸ್ವಾಗತ ಕಮಾನಿನ ಬಳಿ)**
**ಮುರ, ನೆಹರೂನಗರ, ಪುತ್ತೂರು, ದ. ಕ., 574 203**



ಸುಮಾರು 75 ವರ್ಷಗಳ ಸುದೀರ್ಘ ಇತಿಹಾಸ ಇರುವ ಪುತ್ತೂರಿನ ಶಿವಬ್ರಾಹ್ಮಣ ಸಮಾಜ ಸೇವಾ ಸಂಘವು ಕಾಲದ ಆವಶ್ಯಕತೆಗೆ ಅನುಗುಣವಾಗಿ ಹಲವಾರು ಉಪಯುಕ್ತ ಸಮಾಜಮುಖೀ ಕಾರ್ಯಕ್ರಮಗಳನ್ನು ನಡೆಸುತ್ತಾ ಬಂದಿದೆ. ಪುತ್ತೂರಿನ ಸಮೀಪ ಕಬಕ ಗ್ರಾಮದ ಮುರ ಎಂಬಲ್ಲಿ ಹೆದ್ದಾರಿಯ ಪಕ್ಕದಲ್ಲೇ ಒಂದು ಸುಸಜ್ಜಿತ ವಿದ್ಯಾರ್ಥಿ ವಸತಿ ನಿಲಯವನ್ನು ಸ್ಥಾಪಿಸಲಾಗಿದೆ. ಈ ವಿದ್ಯಾರ್ಥಿನಿಲಯದಲ್ಲಿ ತಳ ಹಾಗೂ ಮೇಲಿನ 2 ಅಂತಸ್ತುಗಳಲ್ಲಿ ಒಟ್ಟು 135 ಜನ ವಿದ್ಯಾರ್ಥಿಗಳಿಗೆ ಸುಸಜ್ಜಿತ ವಸತಿ ಸೌಕರ್ಯವಿರುತ್ತದೆ.





ವಿಶಾಲವಾದ ಅಡುಗೆಕೋಣೆ, ಭೋಜನ ಶಾಲೆ ಹಾಗೂ ಪ್ರಾರ್ಥನಾಗೃಹಗಳೂ ಇವೆ. ಪ್ರತೀ ಕೊಠಡಿಗೂ ಲಗ್ತಿಯಾಗಿ ಸ್ನಾನಗೃಹ ಶೌಚಗೃಹಗಳು ಇವೆ. ವಿದ್ಯಾರ್ಥಿ ವಸತಿನಿಲಯದಲ್ಲೇ ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘದ ಶಾಖೆ ಕಾರ್ಯನಿರ್ವಹಿಸುತ್ತಿದ್ದು ನಿವಾಸಿಗಳಿಗೆ ಬ್ಯಾಂಕಿಂಗ್ ಸೌಲಭ್ಯವನ್ನು ಒದಗಿಸಲಾಗಿದೆ. ಸದ್ಯದಲ್ಲೇ 3ನೇ ಅಂತಸ್ತಿನಲ್ಲಿ ಜಿಮ್, ಒಳಾಂಗಣ ಆಟಗಳಿಗೆ ವ್ಯವಸ್ಥೆ, ವಾಚನಾಲಯ, ಧ್ಯಾನಮಂದಿರ ಮುಂತಾದುವುಗಳನ್ನು ನಿರ್ಮಿಸುವ ಯೋಜನೆಯೂ ಇದೆ. ವಿವೇಕಾನಂದ ಸಮೂಹ ಸಂಸ್ಥೆಗಳ ಬಳಿಯಲ್ಲಿಯೇ ಇರುವ ಈ ವಿದ್ಯಾರ್ಥಿನಿಲಯಕ್ಕೆ ನೋಂದಾವಣೆಯನ್ನು ಪ್ರಾರಂಭಿಸಲಾಗಿದೆ. ಉದ್ಯೋಗಿ ಪುರುಷರಿಗೆ ಹಾಗೂ ಹಿರಿಯ ದಂಪತಿಗಳಿಗೂ ಪ್ರತ್ಯೇಕ ಅವಕಾಶವಿದೆ. ನೋಂದಣಿಗೆ ಶ್ರೀಮತಿ ಸುಮತಿ, ಮ್ಯಾನೇಜರ್, ಶಿವಸದನ, ಮುರ. ಮೊಬೈಲ್ : 9980071696 ಇವರನ್ನು ಸಂಪರ್ಕಿಸಲು ಕೋರಲಾಗಿದೆ.

**ಕರುಣ್ ರಾವ್ ಬೆಳ್ಳೆ**
ಸಂಚಾಲಕ, ಕಟ್ಟಡ ಸಮಿತಿ
ಮೊಬೈಲ್ : 9243309120

**ಎನ್. ಕೆ. ಜಗನ್ನಿವಾಸ್ ರಾವ್**
ಅಧ್ಯಕ್ಷ, ಶಿವಬ್ರಾಹ್ಮಣ ಸ. ಸೇ. ಸಂಘ
ಮೊಬೈಲ್ : 9448260888


ಪತ್ರಿಕೆಗೆ ಶುಭ ಬಯಸುವ–



**ಶ್ರೀ ಕಾಂತಾವರ ಜಯಪ್ರಕಾಶ್**
**ಮತ್ತು ಶ್ರೀಲತಾ ಹಾಗೂ**
**ತನ್ವಿ, ನಿವೇದ, ದೃತಿ ಮತ್ತು ದ್ರುವ್**

**RAJESH POWER PRESS**
PRINTERS & PUBLISHERS
**DARBE - 574 202, PUTTUR, D. K., KARNATAKA**
Phone : (08251) 231696, 231697 & 322386
E-mail : msraghunathrao@hotmail.com
The RIGHT Place for the Customer

**ಹೆಬ್ಬಾರ್ ಎಂಟರ್‌ಪ್ರೈಸಸ್**
**ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101**
*ಶುಭ ಸಮಾರಂಭಗಳಿಗೆ ಬೇಕಾಗುವ ಕ್ಯಾಟರಿಂಗ್ ವ್ಯವಸ್ಥೆ, ಶಾಮಿಯಾನ, ಗ್ಯಾಸ್‌ಸ್ಟವ್, ಟೇಬಲ್, ಕುರ್ಚಿ, ಪಾತ್ರೆಗಳು ಹಾಗೂ ಇನ್ನಿತರ ಎಲ್ಲಾ ವ್ಯವಸ್ಥೆಗಳನ್ನೂ ಸಕಾಲದಲ್ಲಿ ಒದಗಿಸಲಾಗುವುದು.*
ಫೋನ್ : 2531493 (O), 2530851 (R), ಮೊಬೈಲ್ : 9448437893

*Sri Hari Adyapady*
*Proprietor*



Ph : 0824-2251597 (R)
2252119 (O)
Mobile : 9448344612
9964072489

**SHIVA ELECTRICALS**
**2nd Floor, Ozanam Complex**
**Church Building, Main Road**
**BAJPE, MANGALORE**




# 'ಶ್ರೀ ಸಭಾ'ದಲ್ಲಿ ಶ್ರೀ ಶ್ರೀ ಮಾಧವಾಶ್ರಮ ಸ್ವಾಮೀಜಿಯವರ ಪಾದಪೂಜೆ ಹಾಗೂ ಗುರುವಚನ




ಹೆಬ್ಬೂರಿನ ಘನಪುರಿ ಸಂಸ್ಥಾನದ ಕೋದಂಡಾಶ್ರಮ ಮಠದ ಪೀಠಾಧಿಪತಿಗಳಾದ ಶ್ರೀ ಶ್ರೀ ಮಾಧವಾಶ್ರಮ ಸ್ವಾಮೀಜಿಯವರು ತಾ. 22–03–2014 ಶನಿವಾರದಂದು ಮಂಗಳೂರಿನ ಸುಬ್ರಹ್ಮಣ್ಯ ಸದನಕ್ಕೆ ಆಗಮಿಸಿ, ಅಂದು ಅಲ್ಲೇ ಮೊಕ್ಕಾಂ ಹೂಡಿದರು. ಮಂಗಳೂರಿನ ಸ್ಥಾನಿಕ ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಸೇರಿ ಸ್ವಾಮೀಜಿಯವರಿಗೆ ಪೂರ್ಣಕುಂಭ ಸ್ವಾಗತವನ್ನು ನೀಡಿದರು. ಈ ಸಂಬಂಧವಾಗಿ ಸದನದಲ್ಲಿ ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆ, ಸಾಮೂಹಿಕ ವಿಷ್ಣು ಸಹಸ್ರನಾಮ ಪಠಣ ಇತ್ಯಾದಿ ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ನಮ್ಮ ಸಮಾಜದ ಹೆಮ್ಮೆಯ ಗಾಯಕಿ ಡಾ. ಸುಶೀಲ ವಿದ್ಯಾರಣ್ಯರವರು ಹಲವಾರು ದೇವರನಾಮಗಳನ್ನು ಹಾಡಿ ಕಾರ್ಯಕ್ರಮಕ್ಕೆ ಶೋಭೆಯನ್ನು ತಂದರು. ಹಲವು ಸಮಾಜ ಬಾಂಧವರು ಪೂಜ್ಯ ಸ್ವಾಮೀಜಿಯವರ ಪಾದಪೂಜೆ ನೆರವೇರಿಸಿ ಧನ್ಯರಾದರು. ಪೂಜ್ಯ ಸ್ವಾಮೀಜಿಯವರು ಆಶೀರ್ವಚನ ನೀಡಿ, ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ ಹಾಗೂ ಸನ್ಯಾಸಾಶ್ರಮಗಳ ವಿಶ್ಲೇಷಣೆ ಮಾಡಿದರು. ಎಲ್ಲಾ ಜನರು ದೈವಭಕ್ತರೂ, ಸಚ್ಚಾರಿತ್ರ್ಯವಂತರೂ ಆಗಬೇಕೆಂದು ಹಿತವಚನ ನೀಡಿದರು. ಶೃಂಗೇರಿ ಶ್ರೀ ಶಾರದಾಪೀಠದ ಜಗದ್ಗುರು ಪೂಜ್ಯ ಶ್ರೀ ಶ್ರೀ ಭಾರತೀತೀರ್ಥ ಸ್ವಾಮೀಜಿಯವರಿಗೆ ಸ್ಥಾನಿಕ ಬ್ರಾಹ್ಮಣ ಸಮಾಜದ ಬಗೆಗಿರುವ ವಿಶೇಷ ಪ್ರೀತಿಯನ್ನು ಸ್ಮರಿಸಿದರು. ಪೂರ್ವಾಶ್ರಮದಲ್ಲಿ ಆತ್ಮಾರಾಮ ಶಾಸ್ತ್ರಿಯವರೆಂದು ನಾಮಾಂಕಿತರಾಗಿದ್ದು, ಸ್ಥಾನಿಕ ಸಮಾಜಕ್ಕೆ ಸೇರಿದವರಾದ ಶ್ರೀಗಳನ್ನು ಶೃಂಗೇರಿ ಶಾರದಾ ಪೀಠಾಧೀನವಾಗಿರುವ ಘನಪುರಿ ಹೆಬ್ಬೂರು ಕೋದಂಡಾಶ್ರಮದ ಪೀಠಾಧಿಪತಿಯಾಗಿ ನೇಮಿಸುವ ಮೂಲಕ ಸ್ಥಾನಿಕ ಸಮಾಜದ ನಿಷ್ಠೆಯನ್ನು ಗುರುತಿಸಿ ಸೂಕ್ತ ಗೌರವಾದರಗಳನ್ನು ನೀಡಿದ ಶ್ರೀ ಶ್ರೀ ಭಾರತೀತೀರ್ಥ ಸ್ವಾಮೀಜಿಯವರ ಉದಾರತೆಯನ್ನು ಸ್ಮರಿಸಿದರು.






ಸ್ಥಾನಿಕ ಸಮಾಜ ಬಂಧುಗಳು ಘನಪುರಿ ಹೆಬ್ಬೂರು ಕೋದಂಡಾಶ್ರಮದೊಂದಿಗೆ ನಿಕಟ ಸಂಬಂಧ ಹೊಂದಿರಬೇಕೆಂದು ಆಶಿಸಿದರು. ನಂತರ ಸಮಾಜ ಬಾಂಧವರು ಪೂಜ್ಯ ಸ್ವಾಮೀಜಿಯವರಿಗೆ ಗುರುಕಾಣಿಕೆಯೊಂದಿಗೆ ನಮಿಸಿ, ಫಲ ಮಂತ್ರಾಕ್ಷತೆಗಳೊಂದಿಗೆ ಆಶೀರ್ವಾದಗಳನ್ನು ಪಡೆದು ಧನ್ಯರಾದರು. ಶ್ರೀ ಸತ್ಯನಾರಾಯಣ ಪೂಜಾ ಪ್ರಸಾದವನ್ನು ಪಡೆದು, ಪ್ರಸಾದ ಭೋಜನವನ್ನು ಸವಿಯುವುದರೊಂದಿಗೆ ಕಾರ್ಯಕ್ರಮವು ಮುಕ್ತಾಯಗೊಂಡಿತು. ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ ಮತ್ತು ಕೋಶಾಧಿಕಾರಿ ಶ್ರೀ ಶ್ರೀಕಾಂತ್ ರಾವ್ ಈ ಎಲ್ಲಾ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿ ಕೊಟ್ಟರು.

*ವರದಿ : ಟಿ. ಬಿ. ಮೋಹನ್ ರಾವ್*


*ಚಿತ್ರ : ಪಿ. ರಘುವೀರ್ ಪೆರ್ಡೂರು*



**ಸಿ. ಯಂ. ರಾವ್ ಕಟಪಾಡಿ**

ಯಶಸ್ವಿ ವಾಸ್ತುಶಾಸ್ತ್ರಜ್ಞರು ಮತ್ತು ಜ್ಯೋತಿಷ್ಯರು


*ಶ್ರೀ ಮುರಳೀಧರ ರಾವ್*
*'ಅನುಗ್ರಹ', ಚರ್ಚ್ ರೋಡ್, ಕಟಪಾಡಿ - 574 105*
ಮೊಬೈಲ್ : 9741816166
ತಪ್ಪದೆ ವೀಕ್ಷಿಸಿ, ಸ್ಪಂದನ ಟಿ.ವಿ. ವಾಹಿನಿಯಲ್ಲಿ 'ಈಶಾವಾಸ್ತು'
ಪ್ರತಿ ಭಾನುವಾರ ಪೂರ್ವಾಹ್ನ 9-00ರಿಂದ 10-00ರ ತನಕ

ಪತ್ರಿಕೆಗೆ ಶುಭ ಬಯಸುವ–

**ಶ್ರೀ ನಾಗರಾಜ್ ಶರ್ಮ**
ಹಾಗೂ
**ಶ್ರೀಮತಿ ಆರತಿ ಶರ್ಮ**
**ಪ್ರಮೋದ್ ಟವರ್ಸ್, ಮಂಗಳೂರು**

*Manish Rao U.*
Tel : (O) 2223301
Mobile : 9448726499 / 8884284939
**NAVA COMPUTER**

*Dealers in : Computers Hardware and Peripherals*
*Computer Sales & Services*
*Alvares Centre, N.H. 17, Nanthoor, Mangalore - 575 005*

ಪತ್ರಿಕೆಗೆ ಶುಭ ಬಯಸುವ–

**ಶ್ರೀ ಸೋಮಶೇಖರನ್**
ಮತ್ತು
**ಶ್ರೀಮತಿ ಅರುಣಾ ಸೋಮಶೇಖರನ್**
**ಚಿಲಿಂಬಿ, ಮಂಗಳೂರು**


**PRAMOD**
**AUTOMOBILES**
30 Years of Service
KARANGALPADY
MANGALORE- 575 003
Ph. : 2493633 (O)
2212723 (R)
M. : 9448260225
Wholesale & Retail Dealers in
2 & 3 WHEELERS SPARES & ACCESSORIES
Prop. : Ln. K. HARSHA KUMAR

**ರಾಮಾ ಅಟೋಮೊಬೈಲ್ಸ್**

ಮಾರುತಿ ವಾಹನ ತಜ್ಞರು

ಮಾಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006
ಫೋನ್ : 0824 - 2454355, ಮೊಬೈಲ್ : 9448545702
ಪ್ರೊ. : ಯು. ಸಂತೋಷ ಕುಮಾರ್, ಉಜ್ಜೋಡಿ



# ಪಂಡಿತ ಎಚ್. ಸುಬ್ರಾಯ ಭಟ್ಟ ಸ್ಮಾರಕ ವೇದ ಪ್ರಚಾರ ಸಮಿತಿ
# ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನ, ಪಾವಂಜೆ, ಹಳೆಯಂಗಡಿ



# ಗಾಯತ್ರೀ ಜಪಯಜ್ಞ

ತುಳುವ ಸಂಸ್ಕೃತಿಯಲ್ಲಿ ಸೇರಿ ಹಿರಿತನವನ್ನು ಮೆರೆದ ಸ್ಥಾನಿಕ ಬ್ರಾಹ್ಮಣ ಸಮಾಜಕ್ಕೆ ಭದ್ರವಾದ, ಭವ್ಯವಾದ ಸುಮಾರು 2000 ವರುಷಗಳಿಗಿಂತಲೂ ಹೆಚ್ಚಿನ ಇತಿಹಾಸವಿದೆಯೆಂದು ಬಲ್ಲ ಮೂಲಗಳಿಂದ ತಿಳಿದಿದೆ. ಸ್ಥಾನಿಕ ಬ್ರಾಹ್ಮಣರು ಈ ಪ್ರದೇಶದ ಗ್ರಾಮಮುಖ್ಯರೂ, ರಾಜಾದಾಯ ಸಂಗ್ರಾಹಕರೂ, ಭೂಮಾಲಿಕರೂ ಆಗಿದ್ದರು. ತುಳುನಾಡನ್ನು ಆಳಿದ ಆಲುಪ, ಭಂಗ, ಚೌಟ, ಕೆಳದಿಯ ನಾಯಕರ ಕಾಲದಲ್ಲಿ ಕೂಡ ಅರಸರ ಮಂತ್ರಿಗಳಾಗಿ, ಕರಣಿಕರಾಗಿ, ಬೊಕ್ಕಸದ ಅಧಿಕಾರಿಗಳಾಗಿ, ಹರಿಕಾರರಾಗಿ, ದಿವಾನರಾಗಿ ಅತ್ಯುನ್ನತ ಸ್ಥಾನವನ್ನು ಅಲಂಕರಿಸಿದ್ದರು. ಸ್ಥಾನಿಕರಿಗಿದ್ದ ಸ್ಥಾನಾಧ್ಯಕ್ಷ ಅಥವಾ ಸ್ಥಾನಾಧಿಪತಿ ಪದವಿಯು ಅತ್ಯಂತ ಗೌರವಯುತವಾಗಿದ್ದು ಪೂಜನೀಯವಾಗಿತ್ತು. ಸ್ಥಾನಿಕರು ಆಗಿನ ಕಾಲದ ಧಾರ್ಮಿಕ ಮತ್ತು ಆರ್ಥಿಕ ಭದ್ರಶಕ್ತಿಯಾಗಿದ್ದರು. ಹೀಗೆ ಸ್ಥಾನಿಕ ಬ್ರಾಹ್ಮಣ ಸಮಾಜದಲ್ಲಿ ಅನೇಕ ಮಂದಿ ವೇದ ವಿದ್ಯಾ ಪಾರಂಗತರಾಗಿ, ವೇದ ವೇದಾಂಗ ಪಂಡಿತರಾಗಿ, ಶಾಸ್ತ್ರ ಪುರಾಣ ಕೋವಿದರಾಗಿ, ತಂತ್ರಾಗಮ ವಿದ್ವಾಂಸರಾಗಿ, ಜ್ಯೋತಿಷ್ಕರಾಗಿ, ರಾಜನೀತಿ ಕೋವಿದರಾಗಿ, ಕಲಾವಿದರಾಗಿ, ಧನಿಕರಾಗಿ, ವಿಮಲ ಗುಣಸಂಪನ್ನರಾಗಿ, ಸಕಲ ವಿದ್ಯಾವಿಶಾರದರಾಗಿ, ಜ್ಞಾನಿಗಳಾಗಿ, ಮಠಾಧಿಪತಿಗಳಾಗಿ, ಮಹಾಪುರುಷರಾಗಿ ಹುಟ್ಟಿಬಂದು ಭೂಮಿಯಲ್ಲಿ ಬೆಳಗಿದ್ದಾರೆ. ಸ್ಥಾನಿಕ ಬ್ರಾಹ್ಮಣ ಸಮಾಜದ ಈ ಸ್ಥಾನಮಾನಕ್ಕೆ ಗಾಯತ್ರೀ ಅನುಷ್ಠಾನವೇ ಕಾರಣವಾಗಿತ್ತೆಂಬುದು ನಿತ್ಯ ಸತ್ಯ. ಇದೇ ಸಮಾಜದಲ್ಲಿ ಸಂಜನಿಸಿದ ಕರ್ಮಯೋಗಿ, ಶ್ರಮಜೀವಿ, ಮಹಾಪುರುಷ ಹಳೆಯಂಗಡಿ ಸುಬ್ರಾಯ ಭಟ್ಟರ ದೀರ್ಘಕಾಲದ ಹಂಬಲದಂತೆ 2002ನೇ ಇಸವಿಯಲ್ಲಿ ನಮ್ಮ ಸಮಾಜ ಬಾಂಧವರೆಲ್ಲರ ಸಹಕಾರದಿಂದ ಒಂದು ತಿಂಗಳ ಕಾಲ ಗಾಯತ್ರೀ ಯಜ್ಞ ಸಂಪನ್ನಗೊಂಡಿರುವುದು ತಮಗೆ ತಿಳಿದ ವಿಚಾರ. ಗಾಯತ್ರೀ ಯಜ್ಞದ ಪೂರ್ಣಾಹುತಿಯು ಪಾವಂಜೆ ಕ್ಷೇತ್ರದಲ್ಲಿ ನಡೆದ ಪರಿಣಾಮವಾಗಿ ಮಹಾಯಾಗಗಳು ಹಾಗೂ ದೇವಳದ ಸಮಗ್ರ ಅಭಿವೃದ್ಧಿಯಾದುದು ಸರ್ವವಿದಿತ.


ಈ ಹಿಂದಿನ ಗಾಯತ್ರೀ ಯಜ್ಞ ನಡೆದು 12 ವರ್ಷಗಳು ಕಳೆದಿರುವುದರಿಂದ ಇದೀಗ ಎರಡನೇ ಬಾರಿ ಹೆಚ್ಚಿನ ಉತ್ಸಾಹದಿಂದ ನಮ್ಮ ಸಮಾಜದಲ್ಲಿ ಗಾಯತ್ರೀ 'ಜಪಯಜ್ಞ' ಆಂದೋಲನ ನಡೆಯಬೇಕಾಗಿದೆ. ಪಂಡಿತ ಸುಬ್ರಾಯ ಭಟ್ಟರು ನಮ್ಮ ಸಮಾಜದ ಸರ್ವತೋಮುಖ ಅಭಿವೃದ್ಧಿಗಾಗಿ ಈ ಗಾಯತ್ರೀ ಜಪಯಜ್ಞವನ್ನು ಆಗಾಗ ಅಲ್ಲಲ್ಲಿ ನಡೆಸಬೇಕೆಂದು ಹಂಬಲಿಸಿದವರು. ಆ ತ್ಯಾಗಮೂರ್ತಿಯ ಅಪೇಕ್ಷೆಯನ್ನು ನೆರವೇರಿಸುವುದರೊಂದಿಗೆ ನಮ್ಮನ್ನು ನಾವೇ ಉದ್ಧರಿಸಿಕೊಳ್ಳುವ ಕಾರ್ಯದಲ್ಲಿ ಸಮಾಜವನ್ನು ತೊಡಗಿಸಲು ಸಮಿತಿಯು ಕಟಿಬದ್ಧವಾಗಿದೆ.

ಇಲ್ಲಿನ ಮೂಲನಿವಾಸಿಗಳಾದ ನಾವು ಪುನಃ ಹಿಂದಿನಂತೆಯೇ ಸಮಗ್ರ ಸಮಾಜದ ಮಾರ್ಗದರ್ಶನದ ಸ್ಥಾನವನ್ನು ಅಲಂಕರಿಸಲು ಅಗತ್ಯವಿರುವ ಧೀಃ ಶಕ್ತಿಯನ್ನು ಪಡೆಯುವರೇ ಸಮಾಜ ಬಾಂಧವರಾದ ತಾವೆಲ್ಲರೂ ಸಹಕರಿಸಿ ಈ ಧರ್ಮಕಾರ್ಯದ ಜವಾಬ್ದಾರಿಯನ್ನು ನಿರ್ವಹಿಸಬೇಕಾಗಿದೆ. ಆದ್ದರಿಂದ ಇದೀಗ ಆರಂಭಗೊಂಡಿರುವ ಈ ಆಂದೋಲನದಲ್ಲಿ ತಾವು ತಮ್ಮ ಬಂಧುಮಿತ್ರರೊಡನೆ ತ್ರಿಕರಣಪೂರ್ವಕ ತೊಡಗಿಸಿಕೊಂಡು ವೈಯಕ್ತಿಕ ಸಾಧನೆಯೊಂದಿಗೆ ಸಮಾಜದ ಶ್ರೇಯೋಭಿವೃದ್ಧಿಯ ಕಾರ್ಯದಲ್ಲೂ ಭಾಗಿಗಳಾಗಬೇಕೆಂದು ವಿನಂತಿಸುತ್ತೇವೆ.

## ಜಪಾರಂಭದಲ್ಲಿ ತೋರಿಸಬೇಕಾದ 24 ಮುದ್ರೆಗಳು


**(ಕೆಳಗೆ ಕೊಟ್ಟ ಶ್ಲೋಕವನ್ನು ಹೇಳುತ್ತಾ ಮುದ್ರೆಗಳನ್ನು ಮಾಡುವುದು)**

**ಸುಮುಖಂ ಸಂಪುಟಂ ಚೈವ ವಿತತಂ ವಿಸ್ತೃತಂ ತಥಾ ।**




1 ಸುಮುಖ | 2 ಸಂಪುಟ | 3 ವಿತತ | 4 ವಿಸ್ತೃತ

**ದ್ವಿಮುಖಂ ತ್ರಿಮುಖಂ ಚೈವ ಚತುಷ್ಪಂಚಮುಖಂ ತಥಾ ।**




5 ದ್ವಿಮುಖ | 6 ತ್ರಿಮುಖ | 7 ಚತುರ್ಮುಖ | 8 ಪಂಚಮುಖ

**ಷಣ್ಮುಖೋಽಧೋಮುಖಂ ಚೈವ ವ್ಯಾಪಕಾಂಜಲಿಕಂ ತಥಾ ।**




9 ಷಣ್ಮುಖ | 10 ಅಧೋಮುಖ | 11 ವ್ಯಾಪಕಾಂಜಲಿ | 12 ಶಕಟ

**ಶಕಟಂ ಯಮಪಾಶಂಚ ಗ್ರಥಿತಂಚೋಽನ್ಮುಖೋನ್ಮುಖಂ ।**




13 ಯಮಪಾಶ | 14 ಗ್ರಥಿತ | 15 ಸನ್ಮುಖೋನ್ಮುಖ | 16 ಪ್ರಲಂಬ

**ಪ್ರಲಂಬ ಮುಷ್ಟಿಕಂ ಚೈವ ಮತ್ಸ್ಯಕೂರ್ಮೋ ವರಾಹಕಃ ॥**



17 ಮುಷ್ಟಿ | 18 ಮತ್ಸ್ಯ | 19 ಕೂರ್ಮ | 20 ವರಾಹ

**ಸಿಂಹಾಕ್ರಾಂತಂ ಮಹಾಕ್ರಾಂತಂ ಮುದ್ಗರಂ ಪಲ್ಲವಂ ತಥಾ ॥**



21 ಸಿಂಹಾಕ್ರಾಂತ | 22 ಮಹಾಕ್ರಾಂತ | 23 ಮುದ್ಗರ | 24 ಪಲ್ಲವ

**ಚತುರ್ವಿಂಶತಿ ಮುದ್ರಾಶ್ಚ ಗಾಯತ್ರ್ಯಾಂ ಸುಪ್ರತಿಷ್ಠಿತಾ ॥**




**SHARMA ENTERPRISES**

**KANKANADY, MANGALORE - 575 002**

**Mob. : 9844187083**

**Prop. :** ***Chethan Sharma***

**PRAVEEN KUMAR ADYAPADY**

**ADVOCATE**

**MANGALORE OFFICE**
JANVI PLAZA, IInd FLOOR
BUNTS HOSTEL, MANGALORE

**BAJPE OFFICE**
OZANAM COMPLEX, IInd FLOOR
CHURCH BUILDING, MAIN ROAD, BAJPE

0824 - 2254478 (O) 9620392584, 9448724981(M), 2254448 (R)

**We undertakes :** Civil, Criminal, Motor Vehicles, A.C., D.C. Cases, Land Conversion, Registration etc.

# ಗಾಯತ್ರೀ ಜಪಯಜ್ಞ

ಈ ಬಾರಿ ಸೂರ್ಯನು ಉಚ್ಚಸ್ಥಾನದಲ್ಲಿರುವಾಗ, ಅಂದರೆ ಮೇಷ ಮಾಸದಲ್ಲಿ ಏಪ್ರಿಲ್ 15ರಿಂದ ಮೇ 14ರ ವರೆಗೆ ನಮ್ಮ ಸಮಾಜ ಬಾಂಧವರ 120 ಮನೆಗಳಲ್ಲಿ ಯಜ್ಞ ನಡೆಯಬೇಕಾಗಿದೆ. ಅದಕ್ಕೆ ಪೂರ್ವಭಾವಿಯಾಗಿ ಮೂರು ಕೋಟಿಗೂ ಮಿಕ್ಕಿ ಗಾಯತ್ರೀಜಪವಾಗಬೇಕಾಗಿದೆ. ಸಂಸ್ಕಾರ ಸಹಿತವಾಗಿ ಸೂರ್ಯೋಪಾಸನೆಯಿಂದ ಕೂಡಿದ ಗಾಯತ್ರೀ ಅನುಷ್ಠಾನದಿಂದ ಪ್ರತಿಯೊಬ್ಬನೂ ತನ್ನ ಜೀವನದ ಔನ್ನತ್ಯವನ್ನು ಸಾಧಿಸಲು ಸಾಧ್ಯ. ಇದೇ ಬ್ರಹ್ಮ ತೇಜ, ಬ್ರಹ್ಮಾಸ್ತ್ರ. ಇದನ್ನು ಹೊಂದಿದವನಿಗೆ ಶತ್ರುಭಯವಿಲ್ಲ. ತೀಕ್ಷ್ಣಮತಿತ್ವ, ಸೂಕ್ಷ್ಮಗ್ರಾಹಿತ್ವ, ನಿಪುಣತೆ, ವೇದಜ್ಞಾನ, ನಿಷ್ಕಾಪಟ್ಯಜೀವನ, ಜೀವನಾಶ್ಯಕ ಸಂಪತ್ತು, ಪರಜ್ಞಾನ ಇವುಗಳು ಲಭಿಸುತ್ತವೆ. ಆದ್ದರಿಂದ ತಾವು ತಮ್ಮ ಶಕ್ತತೆಯನ್ನು ಅರಿತು ಗಾಯತ್ರೀ ಅನುಷ್ಠಾನದಲ್ಲಿ ತೊಡಗಬೇಕಾಗಿ ವಿನಂತಿ. ದಿನಕ್ಕೆ ಒಂದು ಸಾವಿರಕ್ಕೆ ಕಡಿಮೆಯಾಗದಷ್ಟು ಗಾಯತ್ರಿ ಜಪಮಾಡಿ ಲೆಕ್ಕ ಇರಿಸಿಕೊಂಡು ಯಜ್ಞ ಆರಂಭಕ್ಕೆ ಮೊದಲು ಮೇಲಿನ ವಿಳಾಸಕ್ಕೆ ತಮ್ಮ ಜಪ ಸಂಖ್ಯೆಯನ್ನು ಕಳಿಸಿಕೊಡಬೇಕಾಗಿ ವಿನಂತಿ.





## ಶ್ರೀ ಗಾಯತ್ರೀ ಜಪ ವಿಧಿ

*ನಿತ್ಯ ಪ್ರಾತಃ ಸಂಧ್ಯಾ ನಂತರ ಆಚಮನ, ಪ್ರಾಣಾಯಾಮಾದಿಗಳನ್ನು ಮಾಡಿ ಶ್ರೀ ಗುರುಗಣೇಶ ಪ್ರಾರ್ಥನೆಯನ್ನು ಮಾಡುವುದು*

**ಶ್ರೀ ಗುರುಭ್ಯೋ ನಮಃ । ಶ್ರೀ ಮಹಾಗಣಪತಯೇ ನಮಃ ॥**

### ಸಂಕಲ್ಪ

ಮಮೋಪಾತ್ತ ಸಮಸ್ತ ದುರಿತಕ್ಷಯದ್ವಾರಾ ಶ್ರೀಪರಮೇಶ್ವರ ಪ್ರೀತ್ಯರ್ಥಂ ಅಸ್ಮಾಕಂ ಸಮಾಜಬಾಂಧವಾನಾಂ ಶ್ರೇಯೋಭಿವೃದ್ಧ್ಯರ್ಥಂಚ ಕರಿಷ್ಯಮಾಣ
ಶ್ರೀ ಗಾಯತ್ರೀ ಜಪ ಯಜ್ಞಾಂಗತ್ವೇನ ಯಥಾಶಕ್ತಿ ಗಾಯತ್ರೀ ಜಪಮಹಂ ಕರಿಷ್ಯೇ ॥

**ಶ್ರೀ ಗಾಯತ್ರೀ ಮಹಾಮಂತ್ರಸ್ಯ । ವಿಶ್ವಾಮಿತ್ರ ಋಷಿಃ ।**

**ಸವಿತಾ ದೇವತಾ । ಗಾಯತ್ರೀ ಛಂದಃ । ಯಥಾಶಕ್ತಿ ಗಾಯತ್ರೀ ಜಪೇ ವಿನಿಯೋಗಃ ।**

### 1. ಕರನ್ಯಾಸಃ

ಓಂ ತತ್ಸವಿತುರ್ಬ್ರಹ್ಮಾತ್ಮನೇ ಅಂಗುಷ್ಠಾಭ್ಯಾಂ ನಮಃ ।
ಓಂ ವರೇಣ್ಯಂ ವಿಷ್ಣ್ವಾತ್ಮನೇ ತರ್ಜನೀಭ್ಯಾಂ ನಮಃ ।
ಓಂ ಭರ್ಗೋದೇವಸ್ಯ ರುದ್ರಾತ್ಮನೇ ಮಧ್ಯಮಾಭ್ಯಾಂ ನಮಃ ।
ಓಂ ಧೀಮಹೀಶ್ವರಾತ್ಮನೇ ಅನಾಮಿಕಾಭ್ಯಾಂ ನಮಃ ।
ಓಂ ಧಿಯೋ ಯೋ ನಸ್ಸದಾಶಿವಾತ್ಮನೇ ಕನಿಷ್ಠಿಕಾಭ್ಯಾಂ ನಮಃ ।
ಓಂ ಪ್ರಚೋದಯಾತ್ಸರ್ವಾತ್ಮನೇ ಕರತಲಕರಪೃಷ್ಠಾಭ್ಯಾಂ ನಮಃ ॥

### 2. ಅಂಗನ್ಯಾಸಃ

ಓಂ ತತ್ಸವಿತುರ್ಬ್ರಹ್ಮಾತ್ಮನೇ ಹೃದಯಾಯ ನಮಃ ।
ಓಂ ವರೇಣ್ಯಂ ವಿಷ್ಣ್ವಾತ್ಮನೇ ಶಿರಸೇ ಸ್ವಾಹಾ ।
ಓಂ ಭರ್ಗೋದೇವಸ್ಯ ರುದ್ರಾತ್ಮನೇ ಶಿಖಾಯೈ ವಷಟ್ ।
ಓಂ ಧೀಮಹೀಶ್ವರಾತ್ಮನೇ ಕವಚಾಯ ಹುಂ ।
ಓಂ ಧಿಯೋ ಯೋ ನಸ್ಸದಾಶಿವಾತ್ಮನೇ ನೇತ್ರತ್ರಯಾಯ ವೌಷಟ್ ।
ಓಂ ಪ್ರಚೋದಯಾತ್ ಸರ್ವಾತ್ಮನೇ ಅಸ್ತ್ರಾಯ ಫಟ್ ॥
ಓಂ ಭೂರ್ಭುವಸ್ಸ್ವರೋಂ ॥

### 3. ಧ್ಯಾನಂ


ಮುಕ್ತಾವಿದ್ರುಮಹೇಮನೀಲಧವಲಚ್ಛಾಯೈರ್ಮುಖೈಸ್ತ್ರೀಕ್ಷಣೈಃ
ಯುಕ್ತಾಮಿಂದುಕಲಾನಿಬದ್ಧಮಕುಟಾಂ ತತ್ತ್ವಾರ್ಥವರ್ಣಾತ್ಮಿಕಾಂ ।
ಗಾಯತ್ರೀಂ ವರದಾಭಯಾಂಕುಶಕಶಾಶ್ಶುಭ್ರಂ ಕಪಾಲಂ ಗುಣಂ
ಶಂಖಂ ಚಕ್ರಮಥಾರವಿಂದಯುಗಲಂ ಹಸ್ತೈರ್ವಹಂತೀಂ ಭಜೇ ॥

### 4. ಆವಾಹನಂ

ಆಗಚ್ಛ ವರದೇ ದೇವಿ ಜಪೇ ಮೇ ಸನ್ನಿಧೌ ಭವ ।
ಗಾಯಂತಂ ತ್ರಾಯಸೇ ಯಸ್ಮಾದ್ಗಾಯತ್ರೀ ತ್ವಂ ತತಃ ಸ್ಮೃತಾ ॥
ಮಹಾಮಾತರ್ ಮಹಾಮಾಯೇ ಸರ್ವಶಕ್ತಿಸ್ವರೂಪಿಣಿ ।
ಚತುರ್ವರ್ಗಸ್ತ್ವಯಿ ನ್ಯಸ್ತಸ್ತಸ್ಮಾನ್ಮೇ ಸಿದ್ಧಿದಾ ಭವ ॥

### ಮುದ್ರಾಃ

24 ಆರಂಭಿಕ ಮುದ್ರೆಗಳನ್ನು (ಚಿತ್ರದಲ್ಲಿ ತೋರಿಸಿದಂತೆ) ಶ್ಲೋಕ ಹೇಳುತ್ತಾ ಕ್ರಮವಾಗಿ ಮಾಡುವುದು.



### ಜಪ

**ಓಂ ತತ್ಸವಿತು ರ್ವರೇಣ್ಯಂ ಭರ್ಗೋ ದೇವಸ್ಯ ಧೀಮಹಿ ।**
**ಧಿಯೋ ಯೋ ನಃ ಪ್ರಚೋದಯಾತ್ ॥**

(ಜಪವನ್ನು ಇಡೀ ದಿವಸ ರಾತ್ರಿ ವಿಶ್ರಾಂತಿಯವರೆಗೆ ಮಾಡುತ್ತಾ ಇರುವುದು.)

**ಡಾ। ಹರಪ್ರಸಾದ್ ತುದಿಯಡ್ಕ**, ಅಧ್ಯಕ್ಷರು
**ಎಂ. ಶಶೀಂದ್ರ ಕುಮಾರ್**, ಕಾರ್ಯದರ್ಶಿ
**ನಕ್ರೆ ಬಾಲಕೃಷ್ಣ ರಾವ್**, ಸಂಚಾಲಕರು
Mob : 9448547997

*ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿರಿ :*

**ಡಾ। ಯಾಜಿ ಎಚ್. ನಿರಂಜನ ಭಟ್**
**'ಋಷಿಸ್ವರಂ', ಎಂ.ಜಿ.ಎಂ. ಕಾಲೇಜು ವಸತಿಗೃಹದ ಬಳಿ, ಕುಂಜಿಬೆಟ್ಟು, ಉಡುಪಿ**
Ph : 08258-2528285, Mob : 9480485012

**ಅಮರನಾಥ ಎಚ್.**
Mob : 9448619498

*ವಿ. ಸೂ. : ಜಪ ವಿಧಿ ಹಾಗೂ ಮಂತ್ರ ಮುದ್ರೆಗಳ ಬಗ್ಗೆ ತರಬೇತಿಯ ಅಗತ್ಯವಿದ್ದರೆ ತಮ್ಮ ಊರುಗಳಲ್ಲಿ ಜಪ ಮಾಡುವವರನ್ನು ಒಂದೆಡೆ ಸೇರಿಸಿ ಒಂದು ದಿನ ಹಾಗೂ ಸಮಯವನ್ನು ಗೊತ್ತು ಮಾಡಿಕೊಂಡು ನಮಗೆ ತಿಳಿಸಿದಲ್ಲಿ ತರಬೇತಿಗೆ ವ್ಯವಸ್ಥೆ ಮಾಡಲಾಗುವುದು.*

*Prop. : P. Srikanth Rao* Mobile : 9343361618
**M/s. SAMARPAN**
*HOUSE OF STATIONERY*
**Near Vijaya Pen Mart**
**Hampankatta, Mangalore - 1**





**ಹೋಮಿಯೋಪತಿ ಹಾಗೂ**
**ಡಯಟ್ ಸಲಹೆ ಔಷಧಿಗಳಿಗಾಗಿ ಸಂದರ್ಶಿಸಿ.**
**ಡಾ. ಸುಶೀಲ ರಾವ್,** ಬಿ.ಎಚ್.ಎಮ್.ಎಸ್.
**ಹೋಮಿಯೋಪತಿ ಕನ್ಸಲ್ಟೆಂಟ್ ಆ್ಯಂಡ್ ಡಯಟಿಶಿಯನ್**
**ಸ್ಪರ್ಶ ಮೆಡಿಕಲ್ ಸೆಂಟರ್**
**ಬೆಂದೂರ್‌ವೆಲ್ ಸರ್ಕಲ್, ಮಂಗಳೂರು - 2**
ದೂರವಾಣಿ : 0824-4276666 ಮೊಬೈಲ್ : 9844063805



## 'ನಮ್ಮ ಸಾಧಕರು'



### ಶ್ರೀಮತಿ ಅನ್ನಪೂರ್ಣ ರಾಘವೇಂದ್ರ ರಾವ್

ಶ್ರೀಮತಿ ಅನ್ನಪೂರ್ಣ ರಾಘವೇಂದ್ರ ರಾವ್ ಅವರ ಧಾರವಾಡ ಕೇಂದ್ರದಿಂದ "ಶರದ್‌ಸಿಂಗ್ ಕಿ ಕಥಾ ಸಾಹಿತ್ಯ ಮೆ ಮಾನವೀಯ ಮೌಲ್ಯೋ ಕಿ ಖೋಜ್" ಎನ್ನುವ ವಿಷಯದಲ್ಲಿ ಉಡುಪಿ ಪೂರ್ಣಪ್ರಜ್ಞಾ ಸಂಧ್ಯಾ ಕಾಲೇಜಿನ ಪ್ರಾಂಶುಪಾಲರಾದ ಶ್ರೀಮತಿ ಡಾ. ಮಾಧವಿ ಎಸ್. ಭಂಡಾರಿ ಅವರ ಮಾರ್ಗದರ್ಶನದಲ್ಲಿ ಸಲ್ಲಿಸಿದ ಪ್ರಬಂಧಕ್ಕೆ ದಕ್ಷಿಣ ಭಾರತ ಹಿಂದಿ ಪ್ರಚಾರ ಸಭಾ ಚೆನ್ನೈ ಅವರು ಡಾಕ್ಟರೇಟ್ ಪದವಿಪ್ರದಾನ ಮಾಡಿದ್ದಾರೆ.

ಶ್ರೀಮತಿ ಅನ್ನಪೂರ್ಣರವರು ಗುಂಡಿಬೈಲು ಯು.ಪಿ. ರಾಘವೇಂದ್ರ ರಾವ್ ಅವರ ಪತ್ನಿ ಮುದ್ರಾಡಿ ಶ್ರೀ ರಂಗಯ್ಯ ಹೆಬ್ಬಾರ್ ಮತ್ತು ಶ್ರೀಮತಿ ಶಾಂಭವಿ ದಂಪತಿ ಪುತ್ರಿ ಹಾಗೂ ಮುಂಡ್ಕೂರು ದಿ| ಪುಂಡಲಿಕ ವರದರಾವ್ ಶ್ರೀಮತಿ ಶಕುಂತಳಾರವರ ಸೊಸೆಯಾಗಿರುತ್ತಾರೆ.

ಪ್ರಸ್ತುತ ಉಡುಪಿಯ ಮಹೇಶ ಪದವಿಪೂರ್ವ ಕಾಲೇಜಿನ ಉಪನ್ಯಾಸಕಿಯಾಗಿರುವ ಇವರು, ಈ ಹಿಂದೆ ಕಾರ್ಕಳದ ಎಸ್ ವಿ ಟಿ ಕಾಲೇಜು ಹಾಗೂ ಮೂಡಬಿದರೆಯ ಮಹಾವೀರ ಕಾಲೇಜಿನಲ್ಲಿ ಉಪನ್ಯಾಸಕಿಯಾಗಿ ಸೇವೆ ಸಲ್ಲಿಸಿರುತ್ತಾರೆ.

## ಅಲ್ಲಿದೆ ನಮ್ಮನೆ... ಇಲ್ಲಿರುವುದು ಸುಮ್ಮನೆ

ಪಿಲಿಂಜ ರಾಧಾಕೃಷ್ಣ ರಾಯರು (64) ದಿನಾಂಕ 03-03-2014ರಂದು ನಿಧನರಾದರು. ಪತ್ನಿ, ಪುತ್ರಿ, ಪುತ್ರ, ಸಹೋದರ, ಸಹೋದರಿಯರು ಹಾಗೂ ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

* * * * *

ಕೂಡ್ಲು ಶ್ರೀ ಸದಾಶಿವ ಶ್ಯಾನುಭೋಗ್ (64) ಅವರು ದಿನಾಂಕ 17-03-2014ರಂದು ನಿಧನರಾದರು. ಮೃತರು ಪತ್ನಿ, ಪುತ್ರಿಯರು, ಅಳಿಯಂದಿರು ಮತ್ತು ಸಹೋದರ, ಸಹೋದರಿಯರು ಹಾಗೂ ಅಪಾರ ಬಂಧು-ಬಾಂಧವರನ್ನು ಅಗಲಿದ್ದಾರೆ. ಮೃತರು ಈ ಹಿಂದೆ ಕೂಡ್ಲು ಕುತ್ಯಾಳ ಶ್ರೀ ಗೋಪಾಲಕೃಷ್ಣ ದೇವಸ್ಥಾನದ ಆನುವಂಶಿಕ ಮೊಕ್ತೇಸರರಾಗಿದ್ದರು.

* * * * *

ಮೂಡಿಗೆರೆ ದಿ. ರಾಮಕೃಷ್ಣಯ್ಯನವರ ಪತ್ನಿ ಶ್ರೀಮತಿ ಲೀಲಾವತಿ (82)ಯವರು ತಾ. 26-03-2014ರಂದು ಬೆಳಗ್ಗೆ ಮೂಡಿಗೆರೆಯ ತಮ್ಮ ಸ್ವಗೃಹದಲ್ಲಿ ನಿಧನರಾದರು. ಮೃತರು ಮೂವರು ಗಂಡು ಮಕ್ಕಳು, ಇಬ್ಬರು ಹೆಣ್ಣು ಮಕ್ಕಳು ಮತ್ತು ಅಪಾರ ಬಂಧು-ಬಾಂಧವರನ್ನು ಅಗಲಿದ್ದಾರೆ.

* * * * *

ಅಜ್ಜಂಪುರ ದಿ. ನಾಗಪ್ಪಯ್ಯನವರ ಧರ್ಮಪತ್ನಿ ಶ್ರೀಮತಿ ಸರಸ್ವತಮ್ಮ (88)ನವರು ತಾರೀಕು 17-03-2014ರಂದು ನಿಧನ ಹೊಂದಿದರು. ಅವರು ಮಗ, ಸೊಸೆ ಹಾಗೂ ಅಪಾರ ಬಂಧು-ಬಾಂಧವರನ್ನು ಅಗಲಿದ್ದಾರೆ.



## ಶಂಕರ ಪ್ರತಿಷ್ಠಾನ

**ಪ್ರಸಾದಭವನ, ತೆಳ್ಳಾರು ರಸ್ತೆ, ಅನಂತಶಯನ, ಕಾರ್ಕಳ**

**ಸಮಾಜ ಬಾಂಧವರೇ,**

ದಿನಾಂಕ 4-5-2014ರಂದು ಅಪರಾಹ್ನ 3 ಗಂಟೆಗೆ ನಡೆಯುವ ಶಂಕರ ಜಯಂತಿ ಪ್ರಯುಕ್ತ ವಿವಿಧ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿದೆ. ಪ್ರಬಂಧ ಸ್ಪರ್ಧೆಯ ವಿನಹ ಉಳಿದ ಎಲ್ಲಾ ಸ್ಪರ್ಧೆಗಳೂ ಶ್ರೀ ಶಂಕರ ಜಯಂತಿಯಂದು ಮಧ್ಯಾಹ್ನ 2 ಗಂಟೆಯಿಂದ ನಡೆಯಲಿವೆ. ಸಮಾಜ ಬಾಂಧವರೆಲ್ಲಾ ಸ್ಪರ್ಧೆಗಳಲ್ಲಿ ಭಾಗವಹಿಸಿ ಶ್ರೀ ಶಂಕರರಿಗೆ ಗೌರವ ಸಲ್ಲಿಸಬೇಕಾಗಿ ವಿನಂತಿ.

**ಶ್ರೀಮತಿ ಸಾವಿತ್ರಿ ಮನೋಹರ್** — ಮೊಬೈಲ್ : 9741501525
**ಶ್ರೀಮತಿ ಸೌಮ್ಯ ಬಿ. ರಾವ್** — ಮೊಬೈಲ್ : 9482250622

ಜಗದ್ಗುರು ಶ್ರೀ ಶಂಕರಾಚಾರ್ಯ ಮಹಾಸಂಸ್ಥಾನ ದಕ್ಷಿಣಾಮ್ನಾಯ
ಶೃಂಗೇರಿ ಶ್ರೀ ಶಾರದಾಪೀಠದ ಶಾಂಕರತತ್ವ ಪ್ರಸಾರ ಅಭಿಯಾನದ ಪ್ರೇರಣೆಯಿಂದ

## ದಕ್ಷಿಣ ಕನ್ನಡ ಜಿಲ್ಲಾ ಶಂಕರ ಜಯಂತಿ

ಸುಬ್ರಹ್ಮಣ್ಯ ಸಭಾಸದನ, ಜೈಲ್ ರಸ್ತೆ, ಮಂಗಳೂರಲ್ಲಿ
ದಿನಾಂಕ 4-5-2014ನೇ ಭಾನುವಾರ ಬೆಳಗ್ಗೆ 9ರಿಂದ ಸಂಜೆ 6ರ ವರೆಗೆ ನಡೆಯಲಿದೆ.

**ಕಾರ್ಯಕ್ರಮಗಳು**

ಬೆಳಗ್ಗೆ 9ರಿಂದ 11.30 : ಶತರುದ್ರಾಭಿಷೇಕ (ಭಕ್ತಾಭಿಮಾನಿಗಳು ರುದ್ರಾಭಿಷೇಕ, ಮಂತ್ರ ಪಠಣದಲ್ಲಿ ಪಾಲ್ಗೊಳ್ಳಬಹುದು)

**ವಿಶೇಷ ಪೂಜೆ**

11.30ರಿಂದ 12.00 : ಶ್ರೀ ಶಾಂಕರತತ್ತ್ವ ಮತ್ತು ಸಂದೇಶ ಪ್ರವಚನ
12.00ರಿಂದ 12.45 : ಭಜನೆ, ಮಹಾಮಂಗಳಾರತಿ

ಪ್ರಸಾದ ಭೋಜನ ತಿಂಡಿ ಹಾಗೂ ಪಾನೀಯ ಸೇವೆ
**ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಇವರಿಂದ**

ಮಧ್ಯಾಹ್ನ 2.00ರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು
ಶ್ರದ್ಧಾಭಕ್ತಿಗಳಿಂದ ಭಾಗವಹಿಸಿ ಶ್ರೀ ಗುರುಗಳ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ.

**ತಾ. 16-04-2014ರ ಗುರುವಾರದಂದು "ಗಾಯತ್ರಿ ಜಪಯಜ್ಞ"ವು ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಬೆಳಗ್ಗೆ 8-00 ಗಂಟೆಗೆ ನಡೆಯಲಿದೆ. ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ವಿನಂತಿಸುತ್ತೇವೆ.**


Sharekhan
Your guide to the financial jungle
EQUITIES | DERIVATIVES | COMMODITIES
CURRENCY | MUTUAL FUND | IPOs
PMS | DEMAT
Pradeep Rao K.
NAVADURGA FINANCIALS
Ph: 0824-2412905, 2441318 Mobile: 94481 91028

Prakash Rao Mob : 8453679734, 9986071684

KRISHNA ELECTRONICS
Dealers in :
Electronic Spares & T.V., VCD, DVD etc Service Centre,
Car Cds, Speaker, Sub Woofers, USB Players C.C. Cameras
OPP. : SERVICE BUS STAND, RAO & RAO CIRCLE, CITY TOWERS
MANGALORE - 575 003

PREETHIKA AUTOMOBILES
2493633
9845851573
Wholesale & Retail Dealers in :
2 & 3 WHEELERS, SPARES & ACCESSORIES
KARANGALPADY, MANGALORE - 575 003
Dealers in :
Minda Switches, M. K. Products, Swiss Auto Products, Power Coils

ಪತ್ರಿಕೆಗೆ ಶುಭ ಬಯಸುವ–

ಶ್ರೀಮತಿ ಕುಸುಮ ನವೀನ್ ಕುಮಾರ್
ಶ್ರೀಮತಿ ರೇಷ್ಮ, ಶ್ರೀ ವಸಂತ್ ಕುಮಾರ್, ಅನೀಶ್ ರಾವ್
ಶ್ರೀಮತಿ ಸುಶ್ಮ, ಶ್ರೀ ಶಿವಾನಂದ ರಾವ್ ಹಾಗೂ ಅಂಜನ್ ರಾವ್

Phone : 0824 - 2440110, 2213946
VISHRAM MOTORS (P.) LTD.
No. 4, Kodialbail Church Building
K. S. Rao Road, MANGALORE - 575 003
Authorised Dealers for :
Vijai Super GP 150 &
Vikram 3 Wheelers (Petrol & Diesel)


ಎಲ್ಐಸಿ ಪಾಲಿಸಿಗಳ ಪುನರುಜ್ಜೀವನ (Lapsed Policy Revival) ಕ್ಲೇಮ್, ಸರೆಂಡರ್, ಲೋನ್, ನಾಮಿನೇಶನ್ ಇತ್ಯಾದಿ ಸರ್ವೀಸ್‌ಗಳನ್ನು ನೀಡಲಾಗುವುದು ಹಾಗೂ ಇಚ್ಛೆಪಟ್ಟಲ್ಲಿ ಅವರಿಗೆ ಹೊಂದಿಕೆಯಾಗುವಂತಹ ಹೊಸ ಪಾಲಿಸಿಗಳನ್ನು ಮಾಡಿಕೊಡಲಾಗುವುದು. ಅಲ್ಲದೆ ಮೋಟರ್ ವೆಹಿಕಲ್ ಇನ್ಶೂರೆನ್ಸ್, ಹೆಲ್ತ್ ಇನ್ಶೂರೆನ್ಸ್, ಪಾನ್ ಕಾರ್ಡ್ ಹಾಗೂ ಮ್ಯೂಚುವಲ್ ಫಂಡ್ ಇನ್‌ವೆಸ್ಟ್‌ಮೆಂಟ್ ಮಾಡಿಕೊಡಲಾಗುವುದು.
ಸಂಪರ್ಕಿಸಿರಿ :
ಪಿ. ರಾಜೇಂದ್ರ ರಾವ್, ಬಿ.ಎಸ್ಸಿ.
ಕುಂಜತ್ತಬೈಲ್, ಮಂಗಳೂರು, ಮೊಬೈಲ್ : 9242214842



# ಶ್ರೀ ಶಾಂಕರತತ್ವ ಅಭಿಯಾನಂ, ದಕ್ಷಿಣ ಕನ್ನಡ ಜಿಲ್ಲೆ

**C/o ಶ್ರೀ ಸುಬ್ರಹ್ಮಣ್ಯ ಸಭಾ, ಬಿಜೈ ರಸ್ತೆ, ಮಂಗಳೂರು**

ಮಾನ್ಯ ಬಂಧುಗಳೇ,

ಶ್ರೀ ಶಂಕರ ಜಯಂತಿಯನ್ನು ವಿಜೃಂಭಣೆಯಿಂದ ಮನೆಗಳಲ್ಲಿ, ಸಂಘ–ಸಂಸ್ಥೆಗಳಲ್ಲಿ ಹಾಗೂ ತಾಲೂಕು/ಜಿಲ್ಲಾ ಮಟ್ಟದಲ್ಲಿ ನಡೆಸುವುದೆಂದು ನಿರ್ಧರಿಸಲಾಗಿದೆ. ಇದಕ್ಕೆ ಪೂರ್ವಭಾವಿಯಾಗಿ ಮಕ್ಕಳಿಗೆ ಈ ಕೆಳಗಿನಂತೆ ಶಾಂಕರ ಸ್ತೋತ್ರ ಕಂಠಪಾಠ ಸ್ಪರ್ಧೆಯನ್ನು ಏರ್ಪಡಿಸಲು ಕೋರಲಾಗಿದೆ. **ವರ್ಗ 1 : 3–8 ವರ್ಷದ ಮಕ್ಕಳು – ಶ್ರೀ ಶಿವಪಂಚಾಕ್ಷರ ಸ್ತೋತ್ರ; ವರ್ಗ 2 : 8–12 ವರ್ಷದ ಮಕ್ಕಳು – ಶ್ರೀ ಲಲಿತಾ ಪಂಚಕ ಸ್ತೋತ್ರ; ವರ್ಗ 3 : ಪ್ರೌಢಶಾಲಾ ವಿದ್ಯಾರ್ಥಿಗಳು – ಶ್ರೀ ಗಣೇಶ ಪಂಚರತ್ನ ಸ್ತೋತ್ರ.** ಈ ಸ್ಪರ್ಧೆಯನ್ನು ಸ್ಥಳೀಯವಾಗಿ (ಕನಿಷ್ಟ 10 ಮಕ್ಕಳ ಕೂಟಕ್ಕೆ) ನಡೆಸಿ ಬಹುಮಾನ **ವಿಜೇತರ ಸಂಖ್ಯೆಯನ್ನು ಕೇಂದ್ರ ಸಮಿತಿಗೆ ದಿನಾಂಕ 15–04–2014ರ ಮೊದಲು** ತಿಳಿಸಲು ಕೋರಲಾಗಿದೆ. ಬಹುಮಾನ ಆಯಾ ಕೇಂದ್ರದಲ್ಲಿ ಆಚರಿಸುವ ಶಂಕರ ಜಯಂತಿಯಂದು ವಿತರಿಸಬಹುದಾಗಿದೆ. ಇದಲ್ಲದೆ **ಜಿಲ್ಲಾ ಮಟ್ಟದಲ್ಲಿ ಮುಕ್ತ ವರ್ಗಕ್ಕೆ ಮೋಹಮುದ್ಗರ (ಭಜಗೋವಿಂದಂ)ನ ಮೇಲೆ 1000 ಪದಗಳು ಮೀರದಂತಹ ಪ್ರಬಂಧ ಸ್ಪರ್ಧೆ**ಯನ್ನು ನಡೆಸಲಾಗುವುದು. ಈ ಪ್ರಬಂಧವನ್ನು **15–04–2014**ರ ಒಳಗೆ ತಲುಪುವಂತೆ ಕೇಂದ್ರ ಸಮಿತಿಗೆ ಕಳುಹಿಸಲು ಕೋರಲಾಗಿದೆ. ಈ ಸ್ಪರ್ಧೆಗೆ **ಪ್ರಥಮ ರೂ. 1500/– ದ್ವಿತೀಯ ರೂ. 1000/–** ಹಾಗೂ **ತೃತೀಯ ರೂ. 750/–** ಹಾಗೂ **ರೂ. 250/–**ರ ಎರಡು ಪ್ರೋತ್ಸಾಹಕ ನಗದು ಬಹುಮಾನವನ್ನು ಕೊಡಲಾಗುವುದು.

*ಹೆಚ್ಚಿನ ಮಾಹಿತಿಗೆ :* **ಶ್ರೀ ಕರುಣ್ ರಾವ್ ಬೆಳ್ಳೆ ಮೊ : 9243309120**

## ಶಿವಪಂಚಾಕ್ಷರಸ್ತೋತ್ರಮ್



ನಾಗೇಂದ್ರಹಾರಾಯ ತ್ರಿಲೋಚನಾಯ
ಭಸ್ಮಾಂಗರಾಗಾಯ ಮಹೇಶ್ವರಾಯ
ನಿತ್ಯಾಯ ಶುದ್ಧಾಯ ದಿಗಂಬರಾಯ
ತಸ್ಮೈ ನಕಾರಾಯ ನಮಃ ಶಿವಾಯ 1

ಮಂದಾಕಿನೀಸಲಿಲಚಂದನಚರ್ಚಿತಾಯ
ನಂದೀಶ್ವರಪ್ರಮಥನಾಥಮಹೇಶ್ವರಾಯ
ಮಂದಾರಮುಖ್ಯಬಹುಪುಷ್ಪಸುಪೂಜಿತಾಯ
ತಸ್ಮೈ ಮಕಾರಾಯ ನಮಃ ಶಿವಾಯ 2

ಶಿವಾಯ ಗೌರೀವದನಾಧ್ವರನಾಶಕಾಯ
ಶ್ರೀನೀಲಕಂಠಾಯ ವೃಷಧ್ವಜಾಯ
ತಸ್ಮೈ ಶಿಕಾರಾಯ ನಮಃ ಶಿವಾಯ 3

ವಸಿಷ್ಠಕುಂಭೋದ್ಭವಗೌತಮಾರ್ಯ–
ಮುನೀಂದ್ರದೇವಾರ್ಚಿತಶೇಖರಾಯ
ಚಂದ್ರರ್ಕವೈಶ್ವಾನರಲೋಚನಾಯ
ತಸ್ಮೈ ವಕಾರಾಯ ನಮಃ ಶಿವಾಯ 4

ಯಕ್ಷಸ್ವರೂಪಾಯ ಜಟಾಧರಾಯ
ಪಿನಾಕಹಸ್ತಾಯ ಸನಾತನಾಯ
ದಿವ್ಯಾಯ ದೇವಾಯ ದಿಗಂಬರಾಯ
ತಸ್ಮೈ ಯಕಾರಾಯ ನಮಃ ಶಿವಾಯ 5

ಇತಿ ಶ್ರೀಮತ್ಪಹರಮಹಂಸ..........ಕೃತೌ
ಶಿವಪಂಚಾಕ್ಷರಸ್ತೋತ್ರಮ್ ಸಂಪೂರ್ಣಮ್.

## ಲಲಿತಾಪಂಚರತ್ನಮ್



ಪ್ರಾತಃ ಸ್ಮರಾಮಿ ಲಲಿತಾವದನಾರವಿಂದಂ
ಬಿಂಬಾಧರಂ ಪೃಥುಲಮೌಕ್ತಿಕಶೋಭಿನಾಸಮ್
ಆಕರ್ಣದೀರ್ಘನಯನಂ ಮಣಿಕುಂಡಲಾಢ್ಯಂ
ಮಂದಸ್ಮಿತಂ ಮೃಗಮದೋಜ್ಜ್ವಲಫಾಲದೇಶಮ್ 1

ಪ್ರಾತರ್ಭಜಾಮಿ ಲಲಿತಾಭುಜಕಲ್ಪವಲ್ಲೀಂ
ರಕ್ತಾಂಗುಲೀಯಲಸದಂಗುಲಿಪಲ್ಲವಾಢ್ಯಾಮ್
ಮಾಣಿಕ್ಯಹೇಮವಲಯಾಂಗದಶೋಭಮಾನಾಂ
ಪುಂಡ್ರೇಕ್ಷುಚಾಪಕುಸುಮೇಷು ಸೃಣೀರ್ದಧಾನಾಮ್ 2

ಪ್ರಾತರ್ನಮಾಮಿ ಲಲಿತಾಚರಣಾರವಿಂದಂ
ಭಕ್ತೇಷ್ಟದಾನನಿರತಂ ಭವಸಿಂಧುಪೋತಮ್
ಪದ್ಮಾಸನಾದಿಸುರನಾಯಕಪೂಜನೀಯಂ
ಪದ್ಮಾಂಕುಶಧ್ವಜಸುದರ್ಶನಲಾಂಛನಾಢ್ಯಮ್ 3

ಪ್ರಾತಃ ಸ್ತುವೇ ಪರಶಿವಾಂ ಲಲಿತಾಂ ಭವಾನೀಂ
ತ್ರಯ್ಯಂತವೇದ್ಯವಿಭವಾಂ ಕರುಣಾನವದ್ಯಾಮ್
ವಿಶ್ವಸ್ಯ ಸೃಷ್ಟಿವಿಲಯಸ್ಥಿತಿಹೇತುಭೂತಾಂ
ವಿದ್ಯೇಶ್ವರೀ ನಿಗಮವಾಙ್ಮನಸಾತಿದೂರಾಮ್ 4

ಪ್ರಾತರ್ವದಾಮಿ ಲಲಿತೇ ತವ ಪುಣ್ಯನಾಮ
ಕಾಮೇಶ್ವರೀತಿ ಕಮಲೇತಿ ಮಹೇಶ್ವರೀತಿ
ಶ್ರೀಶಾಂಭವೀತಿ ಜಗತಾಂ ಜನನೀ ಪರೇತಿ
ವಾಗ್ದೇವತೇತಿ ವಚಸಾ ತ್ರಿಪುರೇಶ್ವರೀತಿ 5

ಯಃ ಶ್ಲೋಕಪಂಚಕಮಿದಂ ಲಲಿತಾಂಬಿಕಾಯಾಃ
ಸೌಭಾಗ್ಯದಂ ಸುಲಲಿತಂ ಪಠತಿ ಪ್ರಭಾತೇ
ತಸ್ಮೈ ದದಾತಿ ಲಲಿತಾ ಝಟಿತಿ ಪ್ರಸನ್ನಾ
ವಿದ್ಯಾಂ ಶ್ರಿಯಂ ವಿಮಲಸೌಖ್ಯಮನಂತಕೀರ್ತಿಮ್ 6

ಇತಿ ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯಸ್ಯ
ಶ್ರೀಗೋವಿಂದಭಗವಪೂಜ್ಯಪಾದಶಿಷ್ಯಸ್ಯ
ಶ್ರೀಮಚ್ಛಂಕರಭಗವತಃ ಕೃತೌ
ಲಲಿತಾಪಂಚರತ್ನಂ ಸಂಪೂರ್ಣಮ್.

## ಗಣೇಶಪಂಚರತ್ನಮ್



ಮುದಾ ಕರಾತ್ತಮೋದಕಂ ಸದಾ ವಿಮುಕ್ತಿಸಾಧಕಂ
ಕಲಾಧರಾವತಂಸಕಂ ವಿಲಾಸಲೋಕರಕ್ಷಕಮ್
ಅನಾಯಕೈಕನಾಯಕಂ ವಿನಾಶಿತೇಭದೈತ್ಯಕಂ
ನತಾಶುಭಾಶುನಾಶಕಂ ನಮಾಮಿ ತಂ ವಿನಾಯಕಮ್ 1

ನತೇತರಾತಿಭೀಕರಂ ನವೋದಿತಾರ್ಕಭಾಸ್ಕರಂ
ನಮತ್ಸುರಾರಿನಿರ್ಜರಂ ನತಾಧಿಕಾಪದುದ್ಧರಮ್
ಸುರೇಶ್ವರಂ ನಿಧೀಶ್ವರಂ ಗಜೇಶ್ವರಂ ಗಣೇಶ್ವರಂ
ಮಹೇಶ್ವರಂ ತಮಾಶ್ರಯೇ ಪರಾತ್ಪರಂ ನಿರಂತರಮ್ 2

ಸಮಸ್ತಲೋಕಶಂಕರಂ ನಿರಸ್ತದೈತ್ಯಕುಂಜರಂ
ದರೇತರೋದರಂ ವರಂ ವರೇಭವಕ್ತ್ರಮಕ್ಷರಮ್
ಕೃಪಾಕರಂ ಕ್ಷಮಾಕರಂ ಮುದಾಕರಂ ಯಶಸ್ಕರಂ
ಮನಸ್ಕರಂ ನಮಸ್ಕೃತಾಂ ನಮಸ್ಕರೋಮಿ ಭಾಸ್ಕರಮ್ 3


ಅಕಿಂಚನಾರ್ತಿಮಾರ್ಜನಂ ಚಿರಂತನೋಕ್ತಿಭಾಜನಂ
ಪುರಾರಿಪೂರ್ವನಂದನಂ ಸುರಾರಿಗರ್ವಚರ್ವಣಂ
ಪ್ರಪಂಚನಾಶಭೀಷಣಂ ಧನಂಜಯಾದಿಭೂಷಣಂ
ಕಪೋಲದಾನವಾರಣಂ ಭಜೇ ಪುರಾಣವಾರಣಮ್ 4

ನಿತಾಂತಕಾಂತದಂತಕಾಂತಿಮಂತಕಾಂತಕಾತ್ಮಜಮ್
ಅಚಿಂತ್ಯರೂಪಮಂತಹೀನಮಂತರಾಯಕೃಂತನಮ್
ಹೃದಂತರೇ ನಿರಂತರಂ ವಸಂತಮೇವ ಯೋಗಿನಾಂ
ತಮೇಕದಂತಮೇವ ತಂ ವಿಚಿಂತಯಾಮಿ ಸಂತತಮ್ 5

ಮಹಾಗಣೇಶಪಂಚರತ್ನಮಾದರೇಣ ಯೋऽನ್ವಹಂ
ಪ್ರಜಲ್ಪತಿ ಪ್ರಭಾತಕೇ ಹೃದಿ ಸ್ಮರನ್ ಗಣೇಶ್ವರಮ್
ಅರೋಗತಾಮದೋಷತಾಂ ಸುಸಾಹಿತೀಂ ಸುಪುತ್ರತಾಂ
ಸಮೀಹಿತಾಯುರಷ್ಟಭೂತಿಮಭ್ಯುಪೈತಿ ಸೋಚಿರಾತ್ 6

ಇತಿ ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯವರ್ಯಸ್ಯ
ಶ್ರೀಗೋವಿಂದಭಗವತ್ಪೂಜ್ಯಪಾದಶಿಷ್ಯಸ್ಯ
ಶ್ರೀಮಚ್ಛಂಕರಭಗವತಃ ಕೃತೌ
ಗಣೇಶಪಂಚರತ್ನಂ ಸಂಪೂರ್ಣಮ್.


ಪತ್ರಿಕೆಗೆ ಶುಭ ಬಯಸುವ–



**ಡಾ. ದಿವಾಕರ್ ರಾವ್** ಹಾಗೂ
**ಶ್ರೀಮತಿ ಸ್ನೇಹಲತಾ ಮತ್ತು ಕುಟುಂಬ**
**ಸುರತ್ಕಲ್, ಮಂಗಳೂರು**

Prop. : *Kishore Kumar Kedige*
Ph. : 2231524
M. : 9880726325



**KYADIGE AUTOMOBILES**
**Opp. to D.P. Stores, Main Road, B.C. Road, Bantwal Tq.**
***Dealers in : 2 & 3 WHEELERS SPARES***






# ಚಿಣ್ಣರ ಆರ್ಟ್ ಗ್ಯಾಲರಿ





**ಪ್ರಾರ್ಥನಾ ರಾವ್**
*4ನೇ ತರಗತಿ, ಕೆನರಾ ಸ್ಕೂಲ್, ಮಂಗಳೂರು*




**ಕೃಪಾಲ್,** *5ನೇ ತರಗತಿ*
*ಎಸ್.ಆರ್. ಪಬ್ಲಿಕ್ ಸ್ಕೂಲ್, ಹೆಬ್ರಿ*



**ಅನುಜ್ಞಾ**
*ಶ್ರೀದೇವಿ ನರ್ಸರಿ ಸ್ಕೂಲ್, ಕಿನ್ನಿಗೋಳಿ*

ಜ್ಞಾನಶಕ್ತಿ 'ಚಿಣ್ಣರ ಆರ್ಟ್ ಗ್ಯಾಲರಿ'ಗೆ 12 ವರ್ಷದ ಒಳಗಿನ ಮಕ್ಕಳು ತಾವು ರಚಿಸಿದ ರೇಖಾಚಿತ್ರ ಮತ್ತು ಪೈಂಟಿಂಗ್‌ಗಳನ್ನು ಕಳುಹಿಸಬಹುದು. ಇದರೊಂದಿಗೆ ಅವರ ಭಾವಚಿತ್ರ ಕಳುಹಿಸಿದಲ್ಲಿ ಪ್ರಕಟಿಸಲಾಗುವುದು. ಭಾವಚಿತ್ರಗಳನ್ನು ಹಿಂತಿರುಗಿಸಲಾಗುವುದಿಲ್ಲ.

**ನಮ್ಮ ವಿಳಾಸ :**
**ಅಂಚೆ ಪೆಟ್ಟಿಗೆ ನಂ. 206**
**ದರ್ಬೆ - 574 202, ಪುತ್ತೂರು, ದ. ಕ.**




## ಜ್ಞಾನ – ನುಡಿ

ನಿಮಗೆ ಆಪತ್ತು, ದುಃಖ ಮತ್ತು ಚಿಂತೆಗಳ ಕಾರ್ಮೋಡ ಮುಸುಕುವ ಮುಖ್ಯ ಕಾರಣವೆಂದರೆ ನಿಮಗೆ ನಿಮ್ಮ ಸಾಮರ್ಥ್ಯದ ಅರಿವಿಲ್ಲದಿರುವುದೇ ಕಾರಣ.

– **ರಾಮತೀರ್ಥರು**

## ಜ್ಞಾನ – ಗಾದೆ

ಒಂಜಿ ಇಲ್ಲ್ ಎರಡಾಂಟ ನಟ್ಟುನಾಯಗ್ ಎಡ್ಡೆ ಆನ್
ಒಂಜಿ "ಪೂ"ಟ್ ಮಾಲೆ ಆವನ್, ಒಂಜಿ "ಇಟ್ಟಿಗೆ"ಟ್ ಇಲ್ಲ್ ಆವನ್
ಒಂಜಿ ಅರಿ ಬೆಯ್‌ನ್ ಪಂಟ ಮಾತಾ ಅರಿ ಬೆಯಿಲೆಕ್ಕ

## ಜ್ಞಾನ – ನಗೆ

**ನಾಟಕಕಾರ :** ನನ್ನ ನಾಟಕ ಹೇಗಿತ್ತು?
**ವಿಮರ್ಶಕ :** ನನ್ನದೊಂದು ಸಲಹೆ ಕೊಡ್ಲಾ?
**ನಾಟಕಕಾರ :** ಕೊಡಿ.
**ವಿಮರ್ಶಕ :** ನಾಟಕದ ಕೊನೆಯಲ್ಲಿ ಖಳನಾಯಕನಿಗೆ ಪಿಸ್ತೂಲ್‌ನಿಂದ ಶೂಟ್ ಮಾಡುವುದಕ್ಕೆ ಬದಲು ವಿಷ ಕೊಟ್ಟು ಸಾಯಿಸಬಹುದಿತ್ತು. ಶೂಟ್ ಶಬ್ದಕ್ಕೆ ಪ್ರೇಕ್ಷಕರು ಎಚ್ಚೆತ್ತುಬಿಟ್ಟರು!

## ಜ್ಞಾನ – ವಿಸ್ಮಯ

ವಿಶ್ವದಲ್ಲಿ ಒಟ್ಟು 2792 ಆಡುಭಾಷೆಗಳಿವೆ.
ಮಾನವನ ಮೆದುಳಿನ ತೂಕ ಕೇವಲ 1.4 ಕಿ.ಗ್ರಾಂ.
ಮಹಾಭಾರತದಲ್ಲಿ ಒಟ್ಟು ಒಂದು ಲಕ್ಷ ಶ್ಲೋಕಗಳಿವೆ.
ಜಿರಾಫೆಗಳು ದಿನಕ್ಕೆ 20 ನಿಮಿಷ ಮಾತ್ರ ನಿದ್ರೆ ಮಾಡುತ್ತವೆ.

Please log on to : www.subramanyasabha.com For all information on Subramanya Sabha and Address of Stanika in Mangalore, Bantwal & Moodabidri

*Publisher : Sri C. S. Rao, President, Shree Subrahmanya Sabha (R.), Kodialbail, Mangalore - 3*

*Editor : Sri M. S. Raghunath Rao, Darbe, Puttur* *Printed at : Rajesh Power Press, Darbe - 574 202, Puttur, D. K.*